# ನಾಗಶ್ರೀ-ರಾಮಚಂದ್ರಗೆ ಮಗು

‘ಏನಂದ್ಕಂತಾರೆ? ಇಷ್ಟಕ್ಕೂ ಉಪ್ಪರಿಗೆ ಹತ್ತಿ ನನ್ನ ಕೋಣೆಗೆ ಯಾರೂ ಬರಲ್ಲ..’

ಎರಡು ದಿನಕ್ಕೆಂದು ಹೋದವರು ಒಂದು ವಾರ ಅಲ್ಲೇ ಠಿಕಾಣಿ ಹೂಡಿ, ಹೊತ್ತುಗೊತ್ತಿನ ಪರಿವೆ ಇಲ್ಲದೆ ವಿಹರಿಸಿ, ಮಧುಚಂದ್ರ ಅನ್ನುವುದು ಇದಕ್ಕಿಂತ ಉನ್ಮಾದಕಾರಿ, ಚೇತೋಹಾರಿ ಆಗಿರಬಲ್ಲುದೆಂದು ಯಾರಾದರೂ ಹೇಳಿದರೆ ದೇವರಾಣೆ ನಂಬುವುದಿಲ್ಲ ರಾಮಚಂದ್ರ. ವಾಸ್ತವವಾಗಿ ಉಪ್ಪರಿಗೆಯಿಂದ ಕೆಳಗಿಳಿದು ಬಂದಾಗ ಅತ್ತೆ, ಮಾವನ ಮುಖ ನೋಡುವುದಕ್ಕೆ ಅವನಿಗೆ ಮುಜುಗರವೆನಿಸುತ್ತಿದ್ದರೆ ನಾಗಶ್ರೀಗೆ ಯಾವುದೇ ಎಗ್ಗಿಲ್ಲ. ಮಗಳು ಉಕ್ಕಿ, ಸೊಕ್ಕಿ ಮೆರೆದಾಡುತ್ತಿರುವುದನ್ನು ಸಂಭ್ರಮಿಸುವವರಂತೆ ಅವಳ ಹೆತ್ತವರ ಮುಖ ಊರಗಲವಾಗಿತ್ತು. ಮಗಳು, ಅಳಿಯ ಸುಖ ಸಂತೋಷದಿಂದಿರುವುದನ್ನು ಕಂಡು ಎಂಬಂತೆ ನಾಗಶ್ರೀಯ ಅಮ್ಮ ಯಾವ ಬೇನೆ, ಬೇಸರಿಕೆಗಳೂ ಅಮರಿಕೊಳ್ಳದೆ ಗೆಲುವಾಗಿದ್ದರು. ರಾಮಚಂದ್ರ ಅಕ್ಷರಶಃ ಆ ಮನೆಯಲ್ಲಿ ರಾಜೋಪಚಾರ ಅನುಭವಿಸಿದ್ದ. ಹೊತ್ತಿಗೊಂದು ತಿಂಡಿ, ಹೊತ್ತಿಗೊಂದು ಅಡುಗೆ ಮತ್ತು ಹೊತ್ತು ಗೊತ್ತಿಲ್ಲದೆ..

